DOC-317
T.P-2

(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ 11-6-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ.

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ತರಗುಪಿ ವರದ್ರೀಶ್ವರ್ ಎ. ವಿ. ಕುಪ್ಪುರಾವ್ ಪುನರ್ಜನಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನಾಗಾ ದೌರ್ಜನ್ಯ ಫೀಜೋ ಪರ ಸೇನಾಧಿಪತಿಯ ಬಂಧನ !

ಮೈಸೂರು ಅಪೇರಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಛಾವ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತನಯವಾದ ಇಂದ್ರಜಾಲಾಟ
ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ರಾಮರಾಜಪುರಂ, ಮೈಸೂರು 4.

ವಿಶ್ವವಿದ್ಯಾಲಯ ಲೈಬ್ರರಿಗೆ

ಮೈಸೂರು— ದಿ ॥ ಪ್ರೊ ॥ ತಿ. ನ. ಶ್ರೀಕಂಠಯ್ಯನವರ ಪುಸ್ತಕ ಭಂಡಾರಕ್ಕೆ ಸೇರಿದ ಸುಮಾರು 1500 ಪುಸ್ತಕಗಳನ್ನು ಅವರ ಪುತ್ರ ಶ್ರೀ ಟಿ. ಎಸ್. ನಾಗಭೂಷಣರವರು ವಿಶ್ವವಿದ್ಯಾಲಯದ ಲೈಬ್ರರಿಗೆ ಉದಾರವಾಗಿ ದಾನ ಮಾಡಿರುವರು.

★

ಪ್ರಾಮಾಣಿಕತೆ

ಕಲ್ಕತ್ತಾದಲ್ಲಿ ಈಚೆಗೆ ನಡೆದ ವಿಷಯ. ಶ್ರೀಮತಿ ಆರ್. ಸಿ. ಮೇಥಾ ಮತ್ತು ಕೆಲ ಮಂದಿ ಮಹಿಳೆಯರು ಬೆಳಿಗ್ಗೆ 11 ಗಂಟೆ ಹೊತ್ತಿನಲ್ಲಿ ಬುರಾಬಜಾರಿನಿಂದ ಟ್ಯಾಕ್ಸಿ ಮಾಡಿಕೊಂಡು, ಲೇಕ್‌ರೋಡ್ ಹತ್ತಿರ ತಮ್ಮ ಸ್ಥಳದಲ್ಲಿ ಇಳಿದರು : ಆದರೆ ಟ್ಯಾಕ್ಸಿಯಲ್ಲಿಟ್ಟಿದ್ದ ಪೆಟ್ಟಿಗೆ ತೆಗೆದುಕೊಳ್ಳಲು ಮರೆತರು ; ಈ ವಿಚಾರ ಅವರಿಗೆ ಒಂದು ಗಂಟೆ ನಂತರ ಅರಿವಾಯಿತು. ಪೋಲೀಸರಿಗೆ ದೂರು ಕೊಟ್ಟರು. ಕೆಲವು ಗಂಟೆಗಳ ಕಾಲ ನ್ಯಸನಾಕ್ರಾಂತರಾಗಿದ್ದಾಗ, ಟ್ಯಾಕ್ಸಿ ಡ್ರೈವರು ಗುರುದೇವಸಿಂಗ್ ಇವರ ಮನೆಗೆ ಬಂದು ಆ ಪೆಟ್ಟಿಗೆಯನ್ನು ತಲುಪಿಸಿದನು.

★

ಪುರಾತನ ವೈದ್ಯರೊಬ್ಬರ ಹಸ್ತಪ್ರತಿ

ಅಜರಬೈಜಾನ್ ವಿಜ್ಞಾನಗಳ ಅಕಾಡಮಿಯಲ್ಲಿ ಕ್ರಿಸ್ತಾನಂತರ 1488 ರ ಕಾಲದ ಕುತೂಹಲಕಾರಿ ಹಸ್ತಪ್ರತಿ ಇದೆ. ಅದನ್ನು ಪಾರ್ಸಿ ಭಾಷೆಯಿಂದ ಭಾಷಾಂತರಿಸಿದರೆ ' ಚಿಕಿತ್ಸಕರ ಮಂಜರಿ " ಎಂದು ಹೆಸರಾಗುತ್ತದೆ. ಅಲಿ ಇಬ್ನ ಇಸಾ ಅಲ್ ಕಹ್ಹಾಲ್ ಎಂಬುವರಿಂದ ಬರೆಯಲ್ಪಟ್ಟಿರುವ ಈ ಹಸ್ತಪ್ರತಿಯಲ್ಲಿ ನಾನಾ ಬಗೆಯ ಕಣ್ಣು, ಕಿವಿ, ಹೃದಯ ಮತ್ತು ಗಂಟಲು ರೋಗಗಳನ್ನು ಬಣ್ಣಿಸಲಾಗಿದೆ.

●

ಶೃಂಗೇರಿಯಲ್ಲಿ ಸಮಾರಂಭ

ಶೃಂಗೇರಿ— ಬಹುಕಾಲದಿಂದಲೂ ಇಲ್ಲಿ ಅವಶ್ಯವಾಗಿದ್ದ, ರೂ. 1 ಲಕ್ಷದ ಕಲ್ಯಾಣ ಮಂಟಪ ಮತ್ತು ಅತಿಥಿಗೃಹ " ಶಂಕರ ನಿಕೇತನ " ದ ಉದ್ಘಾಟನೆಯನ್ನು ಗೌರ್ನರ್ ಪಕ್ಕಾರವರು ನೆರವೇರಿಸುತ್ತಾ, ಜನತೆ ಶ್ರೀ ಶಂಕರಾಚಾರ್ಯರ ತತ್ವ ರೀತ್ಯಾ ಪಾರಮಾರ್ಥ ಮಾರ್ಗ ಅನುಸರಿಸಿದರೆ, ವಿರುದ್ಧ ಹೋರಾಟ, ಹಿಂಸಾಕೃತ್ಯಗಳಿಂದ ಕೂಡಿದ ಇಂದಿನ ಪ್ರಪಂಚವು ಉತ್ತಮ ಮತ್ತು ಸುಖವಾಗಿರುವುದೆಂದು ಹೇಳಿದರು. ಈಗಿನ ಮಹಾಸ್ವಾಮಿಗಳ ಶಂಕರಾಚಾರ್ಯರ ಮೂರ್ತಿಸ್ವರೂಪವೆಂದೂ ಹೇಳಿದರು.

ಮಹಾಸ್ವಾಮಿಗಳವರು, ಸಂಸ್ಕೃತದಲ್ಲಿ ಪ್ರಾರಂಭಿಸಿ, ಕನ್ನಡಕ್ಕೆ ಬಂದು, ಹಿಂದಿಯಲ್ಲಿ ಸಮಾಪ್ತಿ ಮಾಡಿದ, ಚಿಕ್ಕ ಭಾಷಣ ಮಾಡಿ, ದೇಶಾದ್ಯಂತ ತಾವು ಮಾಡಿದ ಪವಿತ್ರ ಪ್ರವಾಸದ ವಿಷಯ ತಿಳಿಸಿದರು.

ದೇವಸ್ಥಾನದಿಂದ ನಡೆಸಲ್ಪಡುತ್ತಿರುವ ಸಂಸ್ಕೃತ ಪಾಠಶಾಲೆಗೆ ಗೌರ್ನರ್‌ರವರು ರೂ. 1001 ಡೊನೇಷನ್ ಕೊಟ್ಟರು.

ಗೌರ್ನರ್‌ರವರಿಗೆ ಪೌರಸಭಾ ಕಛೇರಿಯಲ್ಲಿ ಪೌರಸನ್ಮಾನ ನೀಡಲಾಯಿತು.

★

ಹಿಂದೂಮತೋದ್ಧಾರ

ಬೆಂಗಳೂರು— ದೇಶದಲ್ಲಿ ಹಿಂದೂಮತವನ್ನು ಉಳಿಸಲು ಮತ್ತು ಬಲಪಡಿಸಲು ಸಮಗ್ರವಾದ ಶ್ರಮ ಪ್ರಯತ್ನಗಳು ಅವಶ್ಯಕವೆಂದು ಮಾಸ್ತಿ ವೆಂಕಟೇಶಯ್ಯಂಗಾರ್ಯರು ಹೇಳಿದರು.

★

ಜನನಕೊಡನೆ ಪ್ರಧಾನಿಗಳು

ಸಿಮ್ಲಾ— ಇಂಡೋ-ಚೈನೀಸ್ ಗಡಿ ಹತ್ತಿರ ಹಿಮಾಚಲ ಪ್ರದೇಶದ 13200 ಅಡಿ ಸಿಪ್ಕೀ ಕಣಿವೆಗೆ ಪ್ರಧಾನಿ ಇಂದಿರಾರವರು ಭೇಟಿ ಕೊಟ್ಟು ರಾತ್ರೆಗಳನ್ನು ಸೋಡಿದರು — ಜವನರು ಅವರಿಗೆ ಟೀ ಇತ್ತರು.

ನೌಗಾ ದೌರ್ಜನ್ಯ ಸೇನಾಧಿಪತಿ

ಕೊಹಿಮಾ— ನಾಗಾ ದೌರ್ಜನ್ಯ ಫೀಜೋ ಪರದ ಸೇನಾಧಿಪತಿ ಜುಹೇಟೋನನ್ನು ಫೀಜೋ ವಿರುದ್ಧ ನಾಗಾಗಳು ಬಂಧಿಸಿಟ್ಟಿರುವರೆಂದು ವರದಿಯಾಗಿದೆ.

★

ಬಾಡಿಗೆ ಬಾಕಿ

ನವದೆಹಲಿ— ಬಿಟ್ಟುಹೋದವರ ಆಸ್ತಿ ಬಗ್ಗೆ ಬಾಡಿಗೆ ಬಾಕಿ ರೂ. 260.28 ಲಕ್ಷವಿದೆ.

★

ವಿಭಜನೆಗೆ ಒಪ್ಪಿತವಿಲ್ಲ

ಹಾಂಕಾಂಗ್— ವಿಯಟ್ನಾಂ ವಿಭಜನೆ ಹಾನ್ಯಾ ಒಪ್ಪುವದಿಲ್ಲವೆಂದು ಹೇಳಲಾಗಿದೆ.

★

ಫ್ರಾನ್ಸಿದಲ್ಲಿ ಚುನಾವಣೆ

ಪ್ಯಾರಿಸ್— ತಾ ॥ 23 ರಂದು ನಡೆಯುವ ಶಾಸನಸಭಾ ಚುನಾವಣೆಯಲ್ಲಿ 70 ಸ್ಥಾನಗಳಿಗೆ 2298 ಮಂದಿ ಸ್ಪರ್ಧಿಸಿರುವರು.

★

ಚೀಣಿಯರ ತರಬೇತು

ಷಿಲಾಂಗ್— ಕೊಹಿಮಾಕ್ಕೆ 12 ಮೈಲಿ ದೂರದಲ್ಲಿ ನಡೆದ ರಕ್ಷಣಾ ಪಡೆ ಮತ್ತು ನಾಗಾ ದೌರ್ಜನ್ಯರ ಘರ್ಷಣೆಯಲ್ಲಿ ಚೀಣಾದಿಂದ ತರಬೇತುಪಡೆದು ಬಂದಿರುವ ನಾಗಾಗಳಿದ್ದರೆಂದು ಹೇಳಲಾಗಿದೆ.

●

ಹ್ಯಾಂಬರ್ಗ್ (ಡಾಡ್)— ನಿರಾಟವಸ್ತುಪ್ರದರ್ಶನದಲ್ಲಿ ಮಿನಿಮೋ ಎಂಬ ಅತ್ಯಂತ ಚಿಕ್ಕ ಮೋಟಾರು ಸೈಕಲ್ ಇಡಲಾಗಿತ್ತು. ಈ ಚಿಕ್ಕವಾಹನವನ್ನು ದೊಡ್ಡ ಪ್ಲಾಸ್ಟಿಕ್ ಚೀಲದಲ್ಲಿಡಬಹುದು. ಗಂಟೆಗೆ 50 ಕಿ. ಮಿ. ಓಡುವ ಇದು 50 ಪೌಂಡು ಭಾರವಿದೆ. [ಯು ಪಿ ಎಸ್

ತುಳಸೀದಾಸ' ಮತ್ತು ದೆವ್ವ ಪಿಡಿತ ಕೊಲೆಪಾತಕ

(ಮುಂದುವರಿದುದು)

ತದನಂತರ ಈ ಕೊಲೆಪಾತಕನ್ನ ಕಣ್ಣು ಮುಂದೆ ಮತ್ತೊಂದು ಪ್ರೇಮಪೂರಿತ ವಿಶ್ವ ಕಂಡುಬಂದಿತು. ತುಳಸೀದಾಸನ ಅಮೌಲ್ಯ ಬುದ್ಧಿವಾದದಂತೆ ನಡೆಯಲುಪ ಕ್ರಮಿಸಿದನು. ಕೆಲವು ತಿಂಗಳ ನಂತರ ತುಳಸೀದಾಸನು ಬಂದು " ನಿನ್ನ ಪಾಪವೆಲ್ಲಾ ತೊಳೆದುಹೋದವು ನಾವು ಜೊತೆಯಲ್ಲಿ ಆಹಾರ ಸ್ವೀಕರಿಸೋಣ, ಬಾ " ಎಂದ ಹೇಳಿದನು.

ಪಂಡಿತರೂ, ವಿದ್ವಾಂಸರೂ ತುಳಸೀದಾಸನ ಮಿತಿಮೀರಿದ ನೀತಿಗೆಟ್ಟ ನಡತ ಳಿಕೆಗೆ ಅತೃಪ್ತಿಗೊಂಡು, ಕಡುಪಾಪಿ ಮತ್ತು ಕ್ರೂರಿಯೊಡನೆ ಹೇಗೆ ಆಹಾರ ಸ್ವೀಕರಿಸುವೆ, ಎಂದು ತುಳಸೀದಾಸನನ್ನು ಕೇಳಿದರು.

ಶ್ರೀ ರಾಮನ ಪವಿತ್ರ ನಾಮೋಚ್ಚರಣೆಯಿಂದ, ಮತ್ತು ಅನುತಾಪದಿಂದ ಅವನ ಪಾಪವೆಲ್ಲಾ ತೊಳೆದುಹೋದವು, ಎಂದನು ತುಳಸೀದಾಸ್. ಬೇಕಾದರೆ ನೀವು ಪರಿಕ್ಷಿಸಬಹುದು, ಎಂದು ಹೇಳಿದನು.

ಪಂಡಿತರೆಲ್ಲರೂ ಒಟ್ಟಾಗಿ ಸೇರಿ, ಒಂದು ಅಸಾಧ್ಯ ಪರೀಕ್ಷೆ ಸೂಚಿಸಿದರು. ಈ ಕೊಲೆಪಾತಕನು ಶ್ರೀ ವಿಶ್ವನಾಥ ದೇವಾಲಯದಲ್ಲಿನ ಕಲ್ಲಿನ ನಂದಿಗೆ ಆಹಾರ ಅರ್ಪಸಲಿ, ಆ ನಂದಿ ಇವನ ಕೈಯಿಂದ ಆಹಾರ ಸ್ವೀಕರಿಸಿದರೆ, ಇವನು ಬ್ರಹ್ಮಹತ್ಯ ದೋಷದಿಂದ ವಿಮೋಚನೆ ಹೊಂದಿರುವನೆಂಬುದನ್ನು ಒಪ್ಪಬೇಕೆಂದು ಹೇಳಿದರು.

ತುಳಸೀದಾಸನು ಇದಕ್ಕೆ ಒಪ್ಪಿದನು. ಕೊಲೆಪಾತಕನ ಜೊತೆಯಲ್ಲಿ ಬಂದನ ಕೊಲೆಪಾತಕನ ಕೈಯಲ್ಲಿ ಆಹಾರ ಇರಿಸಿದನು. ಅಲ್ಲಿ ನೆರೆದಿದ್ದ ಪಂಡಿತರ ಎದುರಿಗೆ ಆ ಆಹಾರವನ್ನು ಕಲ್ಲಿನ ನಂದಿಗೆ ಕೊಡುವಂತೆ ಹೇಳಿದನು. ಕೊಲೆಪಾತಕನು ಹಾಗೇ ಮಾಡಿದನು. ಏನಾಶ್ಚರ್ಯ ! ಆ ಕಲ್ಲಿನ ನಂದಿಯು ಕೊಟ್ಟಿದ್ದನ್ನೆಲ್ಲಾ ತಿಂದು ಬಿಟ್ಟಿತು. ಪಂಡಿತರು ಆಶ್ಚರ್ಯಭರಿತರಾದರು, ಮತ್ತು ಡಂಗುಬಡಿದು ಭಯಭಕ್ತಿಯಿಂದ ತುಳಸೀದಾಸನ ಪಾದಕ್ಕೆರಗಿ, ಅವನನ್ನು ಕಣ್ಣಿಗೆ ಸುಲಭವಾಗಿ ಗೋಚರಿಸುವ ದೇವರೆಂದು ಕಾಣಲು ಹೊರಟರು.

SHAKTI
SUDHA

A Superb Tonic



ಗೋರಕ್ಷಣೆ ನಮ್ಮ, ಪ್ರತಿಯೊಬ್ಬರೂ ಇದಕ್ಕಾಗಿ ಹೆಚ್ಚೆ ಚ್ಚಾಗಿ ನಡೆಯಲಿ

Protect the Cow

ವುಡ್‌ಲಾಂಡ್ಸ್ ಜನವರಿ 6ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾ ಬಾನು, ನಾಸಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ ನಿತ್ಯ ಪ್ರದರ್ಶನ]

ಆಪೆರ— 7—6—68 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ಪಾಲ್ ಮಣಿ

ತಾರಾಗಣ— ಜಯಶಂಕರ್, ಅಶೋಕ್, ತಾಯ್ ನಾಗೇಶ್,
ಕೆ ಆರ್ ವಿಜಯ, ಮನೋರಮ, ಮಣಿಮಾಲ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋರಕ್ಷಣ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆಗಳಿದ್ದಿಂದವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಜಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4
ವಿಳಾಸ— ಗೋರಕ್ಷಣ ಆಫೀಸು 1067- ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4